**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 6532/2016 ಚಾಸಾಃ 13 ಪ್ರಾಸಾಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೇದರನಾಥ್ |
| ತಂದೆಯ ಹೆಸರು | : | ವೇಣುಗೋಪಾಲ |
| ವಯಸ್ಸು | : | 38 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸ | : | ಕೆ.ಆರ್.ಪುರ, ಬೆಂಗಳೂರು |

**ಸಾಕ್ಷಿಯನ್ನು ದಿಃ 25.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-**

ನನಗೆ ಆರೋಪಿಯ ಪರಿಚಯ ಇದೆ. ಸಿದ್ದಾಪುರ ಪೊಲೀಸ್ ಠಾಣೆಯವರು ನಾನು ಇನ್ ಟೂಲ್ ಟೆಕ್ನಾಲಜಿ ಇಂಡಿಯಾ ಪ್ರೈ. ಲಿ. ನಲ್ಲಿ ಡೈರಕ್ಟರ್ ಆಗಿದ್ದು, ನಮ್ಮ ಕಂಪನಿ ಕಂಪ್ಯೂಟರ್ ಸೇಲ್ಸ್ ಮತ್ತು ಸರ್ವೀಸ್ ಕಾರ್ಯನಿರ್ವಹಿಸುತ್ತದೆ. 2013 ನೇ ಇಸವಿಯಲ್ಲಿ ನನ್ನನ್ನು ಕರೆದು ವಿಜಯಕುಮಾರ್ ರವರ ವಿರುದ್ದ ಕಂಪ್ಲೇಟ್ ಆಗಿದೆ ವ್ಯವಹರಾದ ಬಗ್ಗೆ ವಿವರವನ್ನು ಕೊಡಿ ಎಂದು ಸಿದ್ದಾಪುರ ಪೊಲೀಸರು ಕೇಳಿರುತ್ತಾರೆ. ಆರೋಪಿ ಬೆಂಗಳೂರು ಆಸ್ಪತ್ರೆಯಲ್ಲಿ ಐ.ಟಿ. ಸರ್ವೀಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಬೆಂಗಳೂರು ಆಸ್ಪತ್ರೆಯಲ್ಲಿ ಐ.ಟಿ. ಸರ್ವೀಸ್ ವಿಭಾಗದಲ್ಲಿ ಏನಾದರು ಸಮಸ್ಯೆ ಇದ್ದರೆ ಆರೋಪಿ ನಮ್ಮನ್ನು ಕರೆದು ಮಾಡಿಸಿ ಕೊಳ್ಳುತ್ತಿದ್ದರು. ಆ ಬಗ್ಗೆ ಇನ್ ವಾಯ್ಸ್ ನಮ್ಮ ಕಂಪನಿಯಿಂದ ನೀಡುತ್ತಿದ್ದೆವು. ನಮಗೆ ಹಣವನ್ನು ಚೆಕ್ ಮೂಲಕ ಆಸ್ಪತ್ರೆಯವರು ಪಾವತಿ ಮಾಡುತ್ತಿದ್ದರು. ನಾವು ಸಣ್ಣಪುಟ್ಟ ಎಸಸರಿಸ್ ಅನ್ನು ಪಡೆದುಕೊಂಡು ಟೆಕ್ ಸಿಂಗ್ ಸೆಲ್ಯೂಷನ್ ಎಂಬ ನಮ್ಮ ವೆಂಡರ್ ರವರಿಂದ ಪಡೆದುಕೊಂಡು ಬೆಂಗಳೂರು ಆಸ್ಪತ್ರೆಗೆ ಕೊಡುತ್ತಿದ್ದೆವು. ನಮ್ಮ ಕಂಪನಿ ಮತ್ತು ಆಸ್ಪತ್ರೆಯ ನಡುವೆ ಆದ ಎಸಸರಿಸ್ ಸಂಬಂಧಿಸಿ ರೂ.1 ಲಕ್ಷ ಚಿಲ್ಲರೆ ವ್ಯವಹಾರ ಆಗಿತ್ತು. ಆ ಹಣದಲ್ಲಿ ರೂ.70 ಸಾವಿರ ನಮ್ಮ ಕಂಪನಿಗೆ ಬಂದಿದೆ. ಉಳಿದ ಹಣ

ನಮ್ಮ ಕಂಪನಿಗೆ ಬಂದಿರುವುದಿಲ್ಲ. ಬೆಂಗಳೂರು ಆಸ್ಪತ್ರೆಯ ಐ.ಟಿ. ವಿಭಾಗದಲ್ಲಿ ಆರೋಪಿ ವಿಜಯ್ ರವರು ಹಣ ದುರುಪಯೋಗ ಮಾಡಿರುತ್ತಾರೆ ಎಂದು ಪೊಲೀಸ್ ಇನ್ಸ್ ಪೆಕ್ಟರ್ ರವರು ನನಗೆ ಹೇಳಿರುತ್ತಾರೆ. ನಾವು ಬೆಂಗಳೂರು ಆಸ್ಪತ್ರೆಗೆ ಲ್ಯಾಪ್ ಟಾಪ್, ಅಡಾಪ್ಟರ್, ಹಾರ್ಡ್ ಡಿಸ್ಕ್, ಲ್ಯಾಪ್ ಟಾಪ್ ಬ್ಯಾಟರಿ ಸರಬರಾಜು ಮಾಡಿದ್ದೇವೆ. ಆರೋಪಿ ಯಾವ ರೀತಿ ಹಣ ದುರುಪಯೋಗ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಸುಕುಮಾರ್, ಕುನಾಲ್ ಸಿಂಗ್ ಪವಾರ್ ಮತ್ತು ಸಂಜು ಪಾಂಡೆ ರವರ ಪರಿಚಯ ಇಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಸೂಚನೆಃ ಈ ಹಂತದಲ್ಲಿ ಪ್ರಾಜ್ಞಾ ಹಿ.ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿಯನ್ನು ಕೋರಿರುತ್ತಾರೆ. ಅದರಂತೆ ಅನುಮತಿಯನ್ನು ನೀಡಲಾಯಿತು.**

**<u>ಪಾಟೀ ಸವಾಲುಃ ಪ್ರಾಜ್ಞಾ ಹಿ.ಸ.ಸ.ಅ. ರವರಿಂದಃ</u>**

ದಿನಾಂಕಃ01.10.2014 ರಂದು ನನ್ನನ್ನು ಪೊಲೀಸರು ಠಾಣೆಗೆ ಕರೆದಿದ್ದರು ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಆರೋಪಿ ಇನ್ ವಾಯ್ಸ್ ಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳಿ ನಕಲಿ ಇನ್ ವಾಯ್ಸ್ ಗಳನ್ನು ತೋರಿಸಿದ್ದಾರೆ ಎಂದರೆ ಸರಿಯಲ್ಲ. ಆ ನಕಲಿ ಇನ್ ವಾಯ್ಸ್ ಗಳು ನೈಜ ಎಂದು ಆಸ್ಪತ್ರೆಗೆ ತೋರಿಸಿ ಆಸ್ಪತ್ರೆಯಿಂದ ಚೆಕ್ ಗಳ ಮೂಲಕ ಹಣ ದುರ್ಬಳಕೆ ಮಾಡಿ ನಾನು ನೀಡಿರುವ ಲ್ಯಾಪ್ ಟಾಪ್ ಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಆರೋಪಿ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತ ತನ್ನ ಸ್ನೇಹಿತರಾದ ಸುಕುಮಾರ್, ಕುನಾಲ್ ಸಿಂಗ್ ಪವಾರ್ ಹಾಗೂ ಸಂಜೀವ ಪಾಂಡೆ ರವರಿಗೆ ನನಗೆ ನಂಬಿಸಿದ ರೀತಿಯಲ್ಲಿ ಸುಳ್ಳು ಹೇಳಿ ನಂಬಿಸಿ ಅವರ ಅಕೌಂಟ್ ನಂಬರ್ ಮತ್ತು ಪಾನ್ ಕಾರ್ಡ್ ಗಳನ್ನು ಪಡೆದುಕೊಂಡು ಆಸ್ಪತ್ರೆಗೆ ನೀಡಿ ಕಂಪ್ಯೂಟರ್ ವಿಭಾಗಕ್ಕೆ ಸಂಬಂಧಿಸಿದಂತೆ ಅದನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮಿಂದ ಆಸ್ಪತ್ರೆಯವರು ಸರ್ವೀಸ್ ಪಡೆದಿರುತ್ತಾರೆ ಎಂದು ಸುಳ್ಳು ಹೇಳಿ ಹಣ

ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ತಾನು ಸೃಷ್ಟಿಸಿದ ಇನ್ ವಾಯ್ಸ್ ಗಳ ಮೇಲೆ ಅಥಾರೈಸ್ಡ್ ಸಹಿ ಜಾಗದಲ್ಲಿ ತಾನೇ ಸುಳ್ಳು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಇನ್ ವಾಯ್ಸ್ ಗಳನ್ನು ಆಸ್ಪತ್ರೆಯ ಅಕೌಂಟ್ಸ್ ಸೆಕ್ಷನ್ ಗೆ ಹಾಜರುಪಡಿಸಿ ನನ್ನ ಕಂಪನಿಯ ಹೆಸರಿನಲ್ಲಿ ಮತ್ತು ಬೇರೆಯವರ ಹೆಸರಿನಲ್ಲಿ ಪೇಮೆಂಟ್ ಚೆಕ್ ಮತ್ತು ವೋಚರ್ ಗಳನ್ನು ಅಕೌಂಟ್ ಸೆಕ್ಷನ್ ಇಂದ ಪಡೆದುಕೊಂಡು ಚೆಕ್ ಎನ್ ಕ್ಯಾಶ್ ಮಾಡಿರುತ್ತಾರೆ ಎಂದು ವಿಷಯ ತಿಳಿದುಕೊಂಡು ಅಂದಾಜು ಪಟ್ಟಿಯನ್ನು ಸೃಷ್ಟಿಸಿ ಆಸ್ಪತ್ರೆಗೆ ಮೋಸ ಮಾಡಿ ಸುಮಾರು 20 ಲಕ್ಷ ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂಬ ವಿಷಯವನ್ನು ತಿಳಿದುಕೊಂಡು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-3 ಎಂದು ಗುರ್ತಿಸಲಾಯಿತು. ನಾನು ನಿಪಿ-3 ರಂತೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನಿಪಿ-3 ರಂತೆ ನಾನು ಹೇಳಿಕೆ ನೀಡಿದ್ದರೂ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ವಿ.ಎನ್.ಎಸ್. ವಕೀಲರಿಂದಃ</u>**

ನಾನು ಪೊಲೀಸ್ ಠಾಣೆಗೆ ಹೋದ ದಿನಾಂಕ, ತಿಂಗಳು ಮತ್ತು ವರ್ಷ ಸ್ಪಷ್ಟವಾಗಿ ಗೊತ್ತಿಲ್ಲ. ಆರೋಪಿ ಮತ್ತು ಕಂಪನಿಯ ನಡುವೆ ಆದ ವ್ಯವಹಾರದ ಬಗ್ಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಪೊಲೀಸರು ಕರೆದು ಆರೋಪಿ ಹಣ ದುರ್ಬಳಕೆ ಆಗಿದೆ ಎಂದು ಹೇಳಿರುತ್ತಾರೆಯೇ ಹೊರತು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ಎಷ್ಟು ಹಣ ದುರುಪಯೋಗ ಆಗಿದೆ ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಸಾಧ್ಯವಿಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**